# ಕೃಷಿಕನ ಜಲಸಾಹಸ

**ಕಳೆದ ವರ್ಷ ಊರವರೆಲ್ಲ ಸೇರಿ ದುಡಿದು, ವಂತಿಗೆ ಹಾಕಿ ಹೀಗೆಯೇ ಕಟ್ಟವೊಂದನ್ನು ಕಟ್ಟಿಸಿದ್ದರು. ಆದರೆ ಈ ವರ್ಷ ಕೃಷಿಕರೊಬ್ಬರು ಕಟ್ಟ ಕಟ್ಟಿಸಲು ಸ್ವತಃ ಮುಂದಾಗಿ ಯಶಸ್ವಿಯಾದರು.**

ಚಿತ್ರ– ಲೇಖನ: **ಶಂಕರ್ ಸಾರಡ್ಕ**



ಕೇರಳದ ಕಾಸರಗೋಡು ಜಿಲ್ಲೆಯ ಒಂದು ಭಾಗವಾದ ಅಡ್ಯನಡ್ಕ ಊರು ಅಡಿಕೆ, ತೆಂಗು ಇದೀಗ ರಬ್ಬರ್ ಕೃಷಿಗೆ ಹೆಸರುವಾಸಿಯಾದ ಸ್ಥಳ. ಸೀರೆ ಹೊಳೆ ಈ ಪ್ರದೇಶದಲ್ಲಿ ಹರಿಯುತ್ತದೆ. ಇಲ್ಲಿ 4 ದಶಕಗಳ ಹಿಂದೆ ಸಹಭಾಗಿತ್ವದ ಮೂಲಕ ಕೃಷಿಕರು ಹೊಳೆಗೆ ತಡೆಕಟ್ಟಗಳನ್ನು ಹಾಕಿ ಆ ಮೂಲಕವೇ ಭೂಮಿಯಲ್ಲಿ ನೀರಿನ ಸೆಲೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು. ಅದರೆ ಕ್ರಮೇಣ ಕೊಳವೆ ಬಾವಿಯ ಪ್ರಭಾವ ಹೆಚ್ಚಿ ಇಲ್ಲಿದ್ದ ಕಟ್ಟಗಳು ಕಣ್ಮರೆಯಾದವು.

ಕಳೆದ ವರ್ಷ ಕೂರ್ಲುಗಯದ ಕೃಷಿಕರೊಬ್ಬರ ಯತ್ನದಿಂದ ಊರಿನ ಎಲ್ಲ ಸೇರಿ ಕಟ್ಟವನ್ನು ಮತ್ತೆ ಕಟ್ಟಿದ್ದರು. ಆದರೆ ಈ ವರ್ಷ ಜನರನ್ನು ಸೇರಿಸುವ ಯತ್ನ ಸಫಲವಾಗಲಿಲ್ಲ. ಹಾಗಾಗಿ ಅವರು ಕಟ್ಟ ಕಟ್ಟಿಸುವ ವಿಚಾರವನ್ನು ಕೈಬಿಟ್ಟು ಸುಮ್ಮನಿದ್ದರು.

ಏಕಾಂಗಿ ಸಾಹಸ: ಈ ವರ್ಷ ಕಟ್ಟ ಕಟ್ಟಲು ಯಾರೂ ಮನಸ್ಸು ಮಾಡದಾಗ ಶಶಿಧರ್ ಭಟ್ ತಾವೇ ರಂಗಕ್ಕಿಳಿದರು.  ಹೇಗೂ ತನ್ನ ಕೃಷಿ ಭೂಮಿಯ ಬದಿಯಲ್ಲೇ ಸೀರೆ ಹೊಳೆ ಹರಿಯುವುದಲ್ಲವೇ? ಹೊಸ ಕಟ್ಟ ಕಟ್ಟುವ ಪ್ರೇರಣೆಯೂ ಸಿಕ್ಕಿ ಸಾಹಸಕ್ಕಿಳಿದರು. ಆ ಸ್ಥಳದಲ್ಲಿ ಈ ತನಕ ಕಟ್ಟ ಕಟ್ಟಿದ ಚರಿತ್ರೆ ಇರಲಿಲ್ಲ.

ಸುಮಾರು 2500 ಪ್ಲಾಸ್ಟಿಕ್ ಗೋಣಿ ಚೀಲಗಳಲ್ಲಿ ಮರಳು ತುಂಬಿಸಿ ಅದನ್ನು ಸುಮಾರು 200 ಅಡಿ ಅಗಲದ ಹೊಳೆಗೆ ಅಡ್ಡಲಾಗಿ ಇರಿಸಿ ನಡುವೆ ಮಣ್ಣು ತುಂಬಿದರು. 5 ಅಡಿ ತನಕ ಕಟ್ಟದ ಎತ್ತರವನ್ನು ಏರಿಸಿದರು. ಕೂಲಿ